# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

**ಸ್ಪೆಷಲ್ ಕೇಸ್ ಸಂಖ್ಯೆ:** 46/2023

**ಚಾಸಾ–2**

**ಫ್ರಾಸಾ–1**

**ದಿನಾಂಕ 27.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| **ಸಾಕ್ಷಿದಾರರ ಹೆಸರು** | : | ದೀಕ್ಷಿತ್ ಡಿ |
| **ತಂದೆಯ ಹೆಸರು** | : | ದೊಡ್ಡಮಾದಯ್ಯ |
| **ವಯಸ್ಸು** | : | 31 ವರ್ಷ |
| **ವೃತ್ತಿ** | : | ಬೀಟ್ ಫಾರೆಸ್ಟ್ |
| **ವಾಸ ಸ್ಥಳ** | : | ಮಂಗಲ, ಹನೂರು ತಾಲ್ಲೂಕು. |

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ನಾನು ಹೂಗ್ಯಂ ವನ್ಯಜೀವಿ ನಾಲಾರೋಡಿನಲ್ಲಿ 2018 ರಿಂದ 2025 ಮೇ ವರೆಗೆ ಬೀಟ್ ಫಾರೆಸ್ಟ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ11.01.2022 ರಂದು ಕೊಳ್ಳೇಗಾಲದ ಡಿವೈಎಸ್ ಪಿ ರವರು ನಾಲಾರೋಡಿಗೆ ಬಂದು ಆ ಸಮಯದಲ್ಲಿ ಕಳ್ಳಬೇಟೇ ತಡೆ ಶಿಬಿರದಲ್ಲಿ ಕರ್ತವ್ಯ ನಿರ್ವಸುತ್ತಿರುವಾಗ ನನ್ನ ಜೊತೆ ಚಾಸಾ–3 ರವರು ಸಹ ಇದ್ದರು. ನಾಲಾರೋಡಿನ ಚೆಕ್ ಪೋಸ್ಟ್‌ಗೆ ಬೆಳಿಗ್ಗೆ 11.00 ಗಂಟೆಗೆ ಬಂದು ಆಗ ಡಿವೈಎಸ್ ಪಿ ನಾಗರಾಜು ರವರು ಇದ್ದರು. ಅವರು ನಮ್ಮನ್ನು ಕರೆಯುವ ಮುನ್ನ ನಮ್ಮ ಹಿರಿಯ

ಅಧಿಕಾರಿಗಳ ಮೌಖಿಕ ಅನುಮತಿ ಮೇರೆಗೆ ನಾನು ಮತ್ತು ಚಾಸಾ-3 ರವರನ್ನು ಕರೆದುಕೊಂಡು ಯರಂಬಾಡಿ ಕಲ್ಲಟಿ ಬೈಲು ಗ್ರಾಮದ ಹುಚ್ಚಯ್ಯ ಬಿನ್ ದುಂಡಯ್ಯ ರವರ ಜಮೀನಿನಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿ ಹಣಕ್ಕಾಗಿ ಮಾರಾಟ ಮಾಡುವ ಸಲುವಾಗಿ ಬೆಳೆಸಿದ್ದು ಅದರ ಸಂಬಂಧ ಅಮಾನತ್ತುಪಡಿಸಿಕೊಳ್ಳಬೇಕಾಗಿ ಆ ಸಂಬಂಧ ನಾವು ಪಂಚರಾಗಿ ಹಾಜರಿರಲು ಕೋರಿದ್ದು, ಅವರಜೊತೆಯಲ್ಲಿ ಜಿಪಿನಲ್ಲಿ ಬೆಳಿಗ್ಗೆ 11.30 ಕ್ಕೆ ನಾಲಾರೋಡಿನಿಂದ ಹೊರಟು ಮಧ್ಯಾಹ್ನ 12.00 ಯರಂಬಾಡಿ ಕಲ್ಲಟಿ ಬೈಲು ತಲುಪಿದೆವು. ಆಗ ಜೀಪನ್ನು ಮರೆಮಾಡಿ ಯರಂಬಾಡಿ ಮುಖ್ಯರಸ್ತೆಯಿಂದ 50-70 ಅಡಿ ಇರುವ ಗುಡಿಸಿಲಿನ ಮನೆ ಕಡೆ ಕರೆದುಕೊಂಡು ಹೋದರು. ಆ ಸಮಯದ್ಲಿ ಒಬ್ಬ ಆಸಾಮಿಯು ಗುಡಿಸಿಲಿನ ಮುಂಭಾಗ ಕೂತಿದ್ದ. ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ನಾವು ಹಿಡಿದು ವಿಚಾರಿಸಿದಾಗ ಆತನ ಹೆಸರು ಹುಚ್ಚಯ್ಯ ಬಿನ್ ದುಂಡಯ್ಯ, 48 ವರ್ಷ, ಸೋಲಿಗ ಜನಾಂಗ, ಕೂಲಿ ಕೆಲಸ ಎಂದು ತಿಳಿಸಿದರು. ನಂತರ ಓಡಿ ಹೋದ ಬಗ್ಗೆ ವಿಚಾರಿಸಿದಾಗ ಹಾಗೂ ಮೆಯ ಹತ್ತಿರ ಹೋಗಿ ನೋಡಿದಾಗ ಬೇಲಿಯನ್ನು ಏನೋ ಗಿಡವನ್ನು ಬೆಳದಿರುವುದು ಕಂಡು ಬಂತು. ನಂತರ ಪರಿಶೀಲನೆ ಮಾಡಿದಾಗ ಎರಡು ಗಾಂಜಾ ಗಿಡಗಳು ಹೂವು, ಗೊಂಡೆ, ಬೀಜ ಮಿಶ್ರಿತ ಎರಡು ಗಾಂಜಾ ಗಿಡಗಳನ್ನು ನೋಡಿದೆವು. ನಾವು ಈ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಹಣದ ಸಂಪಾದನೆಗಾಗಿ ಬೆಳೆಸಿ ಮಾರಾಟ ಮಾಡಲು ಬೆಳೆಸಿರುವುದಾಗಿ ತಿಳಿಸಿದರು. ನಂತರ ನಾವೆಲ್ಲ ಸಿಬ್ಬಂದಿಗಳು ಸೇರಿ ಎರಡು ಗಾಂಜಾ ಗಿಡ ಗಳನ್ನು ಬೇರು ಸಮೇತ ಕಿತ್ತು ಮನೆಯ ಮುಂಭಾಗ ಬಂದು ತೂಕ ಮಾಡಿದಾಗ 6 ಕೆಜಿ 750 ಗ್ರಾಂ ತೂಕವಿತ್ತು. ಅದರಲ್ಲಿ 100 ಗ್ರಾಂ ಗಾಂಜಾವನ್ನು ಸ್ಯಾಂಪಲ್ ಗಾಗಿ ಅದರ ಮೇಲೆ ಕೆ ಎಂಬ ಅಕ್ಷರದಿಂದ ನಮ್ಮ ಸಮಕ್ಷಮ ಸೀಲು ಮಾಡಿರುತ್ತೇವೆ. ಅದರ ಅಂದಾಜು ಬೆಲೆ 33,750/- ರೂ. ಆಗಬಹುದು ಎಂದು ತಿಳಿದು ಬಂದಿರುತ್ತದೆ. ಮಾಲುಗಳನ್ನು ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ಮಾಡಿ ಸದರಿ ಮಹಜರ್ ನ್ನು ಮಧ್ಯಾಹ್ನ 12.15-1.15 ಗಂಟೆಯವರೆಗೆ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಗಾಂಜಾ ಗಿಡಗಳು 3-4 ಅಡಿ ಎತ್ತರವಿದ್ದು, ಅದಕ್ಕೆ ಬೇಲಿ ಹಾಕಿ ಕಾಣದಂತೆ ಮಾಡಲಾಗಿತ್ತು. ಅಂಗಶೋಧನೆ ಮತ್ತು ಸ್ಥಳ ಪರಿಶೀಲನೆ ಮಾಡಿ ಆರೋಪಿಯಒಪ್ಪಿಗೆ ಪಡೆದು ಅವರ ಅಂಗಶೋಧನೆ ಮತ್ತು ಮನೆ ಪರಿಶೀಲಿಸಲಾಯಿತು. ಆರೋಪಿಯು ಒಪ್ಪಿ ನೋಟೀಸ್ ಗೆ ಸಹಿ ಮಾಡಿರುತ್ತಾರೆ. ಅಲ್ಲಿ ಮಾಡಿದ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೋಗಳನ್ನು ತೋರಿಸಿದ್ದು ಅವುಗಳನ್ನು ಸ್ಥಳ ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳಾಗಿದ್ದು ಅದರಲ್ಲಿ ನಾನು ಇದ್ದು ಆರೋಪಿಯು ಸಹ ಇರುತ್ತಾನೆ. ಅವುಗಳನ್ನು ನಿಪಿ-2 ರಿಂದ ನಿಪಿ-4 ಎಂದು ಗುರುತಿಸಲಾಯಿತು. ಸ್ಥಳಕ್ಕೆ ಹೋಗುವ ಮುನ್ನ ನಮಗೆ ನೋಟೀಸ್ ನ್ನು ಕೊಟ್ಟಿರುತ್ತಾರೆ. ಸಾಕ್ಷಿಯು ಅಂಗಶೋಧನೆ ಮತ್ತು ಸ್ಥಳ ಪರಿಶೀಲನೆ ಮಾಡಲು ಆರೋಪಿಗೆ ಕೊಟ್ಟಂತಹ ನೋಟೀಸ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಆರೋಪಿಯು ಸಹ ನಮ್ಮ ಸಮಕ್ಷಮ ನಿಪಿ-5 ಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಸಾಕ್ಷಿಯು ನೋಟೀಸ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಯಾಂಪಲ್ ಗಾಂಜಾವನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ1 ಎಂದು ಗುರುತಿಸಲಾಯಿತು.ಈ ಬಗ್ಗೆ ತನಿಖಾಧಿಕಾರಿಗಳು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಆರೋಪಿ ಪರ ವಕೀಲರು EP ಯನ್ನು ಹಾಕಿಕೊಂಡಿರುತ್ತಾರೆ. ಆರೋಪಿಯನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲು – ಆರೋಪಿ ಪರ ವಕೀಲರಿಂದ –**

ನಾನು ಸದರಿ ದಿನ ಸರ್ಕಾರಿ ಕೆಲಸ ಮಾಡುವ ಬಗ್ಗೆ ನಮ್ಮ ತನಿಖಾಧಿಕಾರಿಗಳಿಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ದಾಳಿಯಲ್ಲಿ ಭಾಗವಹಿಸಲು ನಮ್ಮ ತನಿಖಾಧಿಕಾರಿಗಳಿಂದ ಲಿಖಿತವಾಗಿ ಅನುಮತಿಯನ್ನು ಪಡೆಯಲಿಲ್ಲ. ನನಗೆ ನೋಟೀಸ್ ನ್ನುಎಷ್ಟು ಗಂಟೆಗೆಕೊಟ್ಟಿದ್ದಾರೆ ಎಂದು ನೋಟೀಸ್ ನಲ್ಲಿ ಸಮಯ ನಮೂದು ಆಗಿಲ್ಲ. ನಾನು ಕರ್ತವ್ಯ ನಿರ್ವಹಿಸುತ್ತಿದ್ದ ವಿಳಾಸಕ್ಕೆ ನೋಟೀಸ್ ನ್ನು ನೀಡಿರುತ್ತಾರೆ. ಘಟನೆಯ ದಿನ ಪಾಲಾರ್ ಹಳ್ಳದ ಕಡೆ ಗಸ್ತಿಗೆ ಹೋಗಿದ್ದೆ. ಪಾಲಾರ್ ಹಳ್ಳದ ಹತ್ತಿರ ಹೋದಾಗ ಬೆಳಿಗ್ಗೆ 10.30 ಗಂಟೆಯಾಗಿತ್ತು. ಅಲ್ಲಿಂದ ವಾಪಸ್ ಬೆಳಿಗ್ಗೆ 11.00 ಗಂಟೆಗೆ ನಾಲಾರೋಡಿಗೆ ಬಂದಿರುತ್ತೇನೆ. ಪೊಲೀಸ್ ರು ಚೆಕ್ ಪೋಸ್ಟ್ ಹತ್ತಿರ ನಗನೆ ಸಿಕ್ಕಿರುತ್ತಾರೆ. ಆರೋಪಿಯ ಮನೆಗೂ, ಚೆಕ್ ಪೋಸ್ಟ್ ಗೂ ಅಂದಾಜು 21 ಕಿ.ಮೀ ದೂರ

ಆಗುತ್ತದೆ. ಘಟನೆಯ ದಿನ ಕರ್ತವ್ಯ ಮಾಡಿದ್ದ ಬಗ್ಗೆ ನಮ್ಮ ಡೈರಿನಲ್ಲಿ ನಮೂದು ಇರುತ್ತದೆ. ಸದರಿ ಡೈರಿಯಲ್ಲಿ ನಾನು ದಾಳಿಯಲ್ಲಿ ಸಹಕರಿಸಿದ ಬಗ್ಗೆ ನಮೂದು ಮಾಡಿರುತ್ತೇವೆ. ಸದರಿ ಡೈರಿಯನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ. ಡೈರಿಯಲ್ಲಿ ದಾಳಿಯಲ್ಲಿ ಭಾಗವಹಿಸಿದ್ದ ಬಗ್ಗೆ ಬರೆದಿಲ್ಲ ಹಾಗೂ ತನಿಖಾಧಿಕಾರಿಯವರಿಗೆ ಸಹಕರಿಸಿಲ್ಲ ಎಂದರೆ ಸರಿಯಲ್ಲ.

ಘಟನಾ ಸ್ಥಳವನ್ನು ತಲುಪಿದಾಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ನಮ್ಮ ಅಂಗಶೋಧನೆಯನ್ನು ನಾಲಾರೋಡಿನ ಹತ್ತಿರ ಮಾಡಿಕೊಂಡಿರುತ್ತೇವೆ. ಈ ಬಗ್ಗೆ ಪೊಟೋ ತೆಗೆಯಲಿಲ್ಲ ಮತ್ತು ಮಹಜರ್ ಮಾಡಿಲ್ಲ. ನಾವು ಸ್ಥಳಕ್ಕೆ ಸ್ಕಾರ್ಪಿಯೋ ವಾಹನದಲ್ಲಿ ಹೋಗಿರುತ್ತೇವೆ. ಸದರಿ ಸ್ಕಾರ್ಪಿಯೋ ವಾಹನ ಸರ್ಕಾರಿ ವಾಹನವಾಗಿರುತ್ತದೆ. ಸದರಿ ವಾಹವನ್ನು ತಪಾಸಣೆ ಮಾಡಿರುತ್ತೇವೆ. ಈ ಬಗ್ಗೆ ಯಾವುದೇ ಫೋಟೋ ತೆಗೆಯಲಿಲ್ಲ. ನಾವು ವಾಹನದಲ್ಲಿ ಸ್ಕಾರ್ಪಿಯೋ ದಲ್ಲಿ ಹೋಗಲಿಲ್ಲ, ಆದರೆ ಜೀಪಿನಲ್ಲಿ ಹೋದ ಬಗ್ಗೆ ಮಹಜರ್ ನಲ್ಲಿ ಬರೆದಿರುತ್ತಾರೆ ಎಂದರೆ ಹೌದು. ದಾಳಿಯ ಸ್ಥಳದಲ್ಲಿ ಒಂದು 5 ನಿಮಿಷ ಕಾದು ಯಾವ ಮನೆ ಎಂದು ನೋಡುತ್ತಿದ್ದೆವು. ಅಲ್ಲಿ ಅಕ್ಕಪಕ್ಕದಲ್ಲಿ ಆ ಮನೆಯ ಬಗ್ಗೆ ಯಾರನ್ನೂ ವಿಚಾರಿಸಲಿಲ್ಲ. ದಾಳಿಯ ಸಮಯದಲ್ಲಿ ಸದರಿ ಮನೆಯಲ್ಲಿ ಆರೋಪಿ ಮತ್ತು ಅವರ ಹೆಂಡತಿ ಇದ್ದರು. ಆರೋಪಿ ಇದ್ದಂತಹ ಮನೆ ನಂಬರ್ ಗೊತ್ತಿಲ್ಲ, ಅದು ತೋಟದ ಮನೆಯಾಗಿರುತ್ತದೆ. ಆರೋಪಿಯ ಮನೆಯ ಹಕ್ಕುಪತ್ರದ ನಂಬರ್ ಗೊತ್ತಿಲ್ಲ. ಸದರಿ ಜಮೀನು ಒಂದೂವರೆ ಎಕರೆ ಇರುತ್ತದೆ. ಜಮೀನಿಗೆ ಸಂಬಂಧಪಟ್ಟು ನಾನು ದಾಖಲೆಯನ್ನು ನೋಡಿಲ್ಲ.

ನಾನು ಸ್ಥಳಕ್ಕೆ ಹೋಗಿಲ್ಲ, ಅಂಗಶೋಧನೆ ಮಾಡಿಲ್ಲ ಹಾಗೂ ವಾಹನವನ್ನು ಶೋಧನೆ ಮಾಡಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡಿ ಮುಗಿದಾಗ ಮಧ್ಯಾಹ್ನ 1.15 ಗಂಟೆಯಾಗಿತ್ತು. ಮಹಜರ್ ಗೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಜೀಪಿನಲ್ಲಿ ಲ್ಯಾಪ್ ಟಾಪ್ ಹಾಗೂ ಬ್ಯಾಟರಿ ಚಾರ್ಜರ್ ನಿಂದ ಪ್ರಿಂಟ್ ತೆಗೆದ ಬಗ್ಗೆ ಫೋಟೋ ತೆಗೆದಿರುತ್ತೇವೆ. ಸದರಿ ಫೋಟೋವನ್ನು ಹ್ಯಾಂಡಿಕ್ಯಾಮ್ ಕ್ಯಾಮೆರಾದಲ್ಲಿ ತೆಗೆದಿರುತ್ತೇವೆ. ಯಾವುದೇ ಫೋಟೋವನ್ನು ತೆಗೆದಿಲ್ಲ ಹಾಗೂ ಸ್ಥಳದಲ್ಲಿ ಪ್ರಿಂಟ್ ತೆಗೆದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಾರ್ಯಾಚರಣೆಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ಫೋಟೋವನ್ನು ನಾನು ಹೇಳಿದ ಸ್ಥಳದಲ್ಲಿ ತೆಗೆದಿಲ್ಲ, ಅದನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ತನಿಖಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಯಾಂಪಲ್ ಗಾಗಿ 100 ಗಾಂಜಾಕ್ಕೆ ಸ್ಥಳದಲ್ಲಿ ಸಹಿ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿಕೆಯನ್ನು ಕೊಡಲು ರಾಮಾಪುರ ಪೊಲೀಸ್ ಠಾಣೆಗೆ ಕರೆಸಿರುತ್ತಾರೆ. ದಿನಾಂಕ ನೆನಪಿಲ್ಲ. ಪೊಲೀಸ್ ಠಾಣೆಗೆ ಹೋದಾಗ ಬೆಳಿಗ್ಗೆ 10.00–10.30 ಗಂಟೆಯಾಗಿರಬಹುದು. ನಾನು ತನಿಖಾಧಿಕಾರಿಯವರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**